# **ಮಹೇಶ ಜಾಧವ...** ಕತ್ತಲೆಯಿಂದ ಬೆಳಕಿನೆಡೆಗೆ ಕರೆತರುವ ಪ್ರಯತ್ನ

ಎಚ್.ಐ.ವಿ./ಏಡ್ಸ ಎಂಬ ಶಬ್ದ ಕಿವಿಗೆ ಬಿದ್ದರೇನೇ ಎಲ್ಲರಿಗೂ ಭಯ. ಎಚ್.ಐ.ವಿ. ಪೀಡಿತ ಮಕ್ಕಳನ್ನು ಕಂಡರೆ ಇನ್ನಿಲ್ಲದ ಮುಜುಗರ. ಇನ್ನು ಸೇವೆ ಎಂದರೆ ಜನರೇ ದೂರ ಸರಿಯುತ್ತಾರೆ. ಆದರೆ ಬೆಳಗಾವಿಯ ಮಹೇಶ ಜಾಧವ ಎಚ್.ಐ.ವಿ. ಪೀಡಿತ ಮಕ್ಕಳನ್ನು ತನ್ನ ಮನೆಯಲ್ಲಿ ಇಟ್ಟುಕೊಂಡು ತನ್ನವರಂತೆ ಪ್ರೀತಿಸಿ, ಬೆಳೆಸಿ, ಪೋಷಿಸಿ ಕತ್ತಲೆಯಿಂದ ಬೆಳಕಿನೆಡೆಗೆ ಕರೆತರುವ ಪ್ರಯತ್ನ ನಡೆಸಿದ್ದಾರೆ. ಅದರಲ್ಲಿ ಯಶಸ್ಸನ್ನೂ ಕಂಡಿದ್ದಾರೆ



ವೃತ್ತಿಯಿಂದ ವಾಣಿಜ್ಯೋದ್ಯಮದಲ್ಲಿ ತೊಡಗಿಸಿಕೊಂಡಿದ್ದರೂ ಪ್ರವೃತ್ತಿಯಿಂದ ಸಮಾಜ ಸೇವೆಗೆ ತಮ್ಮ ಬದುಕನ್ನು ಮೀಸಲಿರಿಸಿಕೊಂಡಿರುವುದು ಹೆಮ್ಮೆಯ ಸಂಗತಿ, ಬೆಳಗಾವಿಯ ಕಣಬರ್ಗಿ ಗ್ರಾಮದಲ್ಲಿ ಜುಲೈ 22 1986 ರಲ್ಲಿ ಜನಿಸಿದ ಅವರು ಬಾಲ್ಯ ಜೀವನ ಬಡತನದಿಂದ ಕೂಡಿತ್ತು. ಪ್ರಾಥಮಿಕ ಶಿಕ್ಷಣ ಕಣಬರ್ಗಿಯ ಸಿದ್ದೇಶ್ವರ ಹೈಸ್ಕೂಲಿನಲ್ಲಿ ಆಯಿತು. ನಂತರ ಕಂಪ್ಯೂಟರ್ ಸೈನ್ಸ ಮತ್ತು ಇಂಜಿನಿಯರಿಂಗ್ ಮುಗಿಸಿ ಸಣ್ಣ ಪುಟ್ಟ ಉದ್ಯೋಗಗಳನ್ನು ಆರಂಭಿಸಿ ಆರ್ಥಿಕವಾಗಿ ಸಮರ್ಥವಾದ ಮಹೇಶ ತನ್ನ ಗಳಿಸಿದ ಸ್ವಲ್ಪ ಭಾಗವನ್ನು ಸಮಾಜಕ್ಕೆ ನೀಡುವುದಾಗಿ ತೀರ್ಮಾನಿಸಿದರು.

ಬೆಳಗಾವಿಯ ಕಣಬರ್ಗಿಯಲ್ಲಿ 2010 ರಲ್ಲಿ "**ಮಹೇಶ ಫೌಂಡೇಶನ್**" ಸ್ಥಾಪಿಸಿ ಅದರ ಅಧ್ಯಕ್ಷರಾಗಿ ಅನಾಥ ಬಡ ಮಕ್ಕಳ ಹಾಗೂ ಎಚ್.ಐ.ವಿ. ಪೀಡಿತ ಮಕ್ಕಳ ಕಲ್ಯಾಣಕ್ಕಾಗಿ ಶ್ರಮಿಸುತ್ತಿರುವ ಅವರ ಕಾರ್ಯವೈಖರಿಯನ್ನು ಎಷ್ಟು ಅಭಿನಂದಿಸಿದರೂ ಕಡಿಮೆಯೇ. ಪ್ರಾರಂಭದಲ್ಲಿ ಸ್ವಂತ ಮನೆಯಲ್ಲಿ ಅನಾಥಾಶ್ರಮವನ್ನು ಆರಂಭಿಸಿ ನಂತರ ಬಾಡಿಗೆ ಮನೆಯಲ್ಲಿ ಆಶ್ರಮವನ್ನು ವರ್ಗಾಯಿಸಿದರು. ಆದರೆ ನಂತರ ಆ ಮನೆ ಕೂಡ ಮಕ್ಕಳ ಲಾಲನೆ ಪೋಷಣೆಗೆ ಚಿಕ್ಕದಾಗುತ್ತಿತ್ತು. 5 ವರ್ಷ ಸರಕಾರದಿಂದ ಜಾಗವನ್ನು ಪಡೆಯಲು ಹರಸಾಹಸ ಮಾಡಲಾಯಿತು, ಫಲಿತಾಂಶ ಬರಲಿಲ್ಲ. ನಂತರ ತನ್ನ ಕುಟುಂಬದವರು ಇರುವ ಮನೆಯನ್ನು ದಾನದ ರೂಪದಲ್ಲಿ ಸಂಸ್ಥೆಗೆ ನೀಡಿ ಸ್ವಂತ ಕುಟುಂಬ ಸದಸ್ಯರೊಂದಿಗೆ ಬೆಳಗಾವಿಯ ರಾಮತೀರ್ಥ ನಗರದಲ್ಲಿ ಬಾಡಿಗೆ ಮನೆಯಲ್ಲಿ ಇದ್ದಾರೆ.

ಮನೆಯಲ್ಲಿ ಎಚ್.ಐ.ವಿ. ಪೀಡಿತ ಮಕ್ಕಳ ಅನಾಥಾಶ್ರಮವನ್ನು ಆರಂಭಿಸಿದ ಮಹೇಶ ಜಾಧವ ಅವರಿಗೆ ಸಾಕಷ್ಟು ತೊಂದರೆಗಳು ಬಂದವು. ಶಾಲೆಗೆ ಮಕ್ಕಳನ್ನು ಸೇರಿಸಿಕೊಳ್ಳುತ್ತಿರಲಿಲ್ಲ ವಿರೋಧಿಸುತ್ತಿದ್ದರು. ಮನೆ ಬಾಡಿಗೆಗೆ ನೀಡುತ್ತಿರಲಿಲ್ಲ ಮತ್ತು ಇದ್ದ ಬಾಡಿಗೆ ಮನೆಯ ನೆರೆಹೊರೆಯವರು ಮನೆ ಖಾಲಿ ಮಾಡುವಂತೆ ಒತ್ತಾಯಿಸುತ್ತಿದ್ದರು. ಸಂಬಂಧಿಕರು ಮನೆಗೆ ಬರುವುದು ಕಡಿಮೆಯಾಯಿತು. ಆತ್ಮೀಯ ಸ್ನೇಹಿತರು ದೂರವಾದರು. ಆದರೂ ಇವುಗಳನ್ನು ಲೆಕ್ಕಿಸದೆ ಮಹೇಶ ಜಾಧವ ಅವರು ಮುಂದೆ ನಡೆಯುತ್ತಾ ಎಚ್.ಐ.ವಿ. ಪೀಡಿತ ಮಕ್ಕಳ ಹಕ್ಕುಗಳಿಗೆ ಹೋರಾಟ ಮಾಡುತ್ತ ಬಂದರು.

**ಮಹೇಶ ಜಾಧವ ಅವರ ಅಧ್ಯಕ್ಷತೆಯಲ್ಲಿ ಮಹೇಶ ಫೌಂಡೇಶನ್ ಸಂಸ್ಥೆಯಿಂದ ನಡೆಯುತ್ತಿರುವ ಕಾರ್ಯಕ್ರಮಗಳ ವಿವರ ಈ ಕೆಳಗಿನಂತೆ ಇದೆ.**

1. **ಆಶಾಕಿರಣ ಮಕ್ಕಳ ಆರೈಕೆ ಕೇಂದ್ರ**
   ಕಾರ್ಯಾರಂಭ: **2012** ರಲ್ಲಿ
   ಕಾರ್ಯಕ್ರಮದ ಉದ್ದೇಶ: ಎಚ್.ಐ.ವಿ. ಪೀಡಿತ ಮಕ್ಕಳಿಗೆ ಉಚಿತ, ವಸತಿ, ಆಹಾರ, ಆರೋಗ್ಯ ಮತ್ತು ಶಿಕ್ಷಣದ ವ್ಯವಸ್ಥೆ.
   ಫಲಾನುಭವಿಗಳು: ಇದುವರೆಗೆ **600** ಮಕ್ಕಳಿಗೆ ಸಹಾಯ

2. **ಆಧಾರ ವಿದ್ಯಾ**
   ಕಾರ್ಯರಂಭ**: 2012** ರಲ್ಲಿ
   ಕಾರ್ಯಕ್ರಮದ ಉದ್ದೇಶ**:** ಎಚ್.ಐ.ವಿ. ಪೀಡಿತ ಸ್ಲಂನಲ್ಲಿರುವ ಮಕ್ಕಳು ಮತ್ತು ಬಡಮಕ್ಕಳಿಗೆ ಶಿಕ್ಷಣದ ಸಹಾಯ**.**
   ಫಲಾನುಭವಿಗಳು**:** ಇದುವರೆಗೆ **7400** ಮಕ್ಕಳಿಗೆ ಸಹಾಯ**.**

3. **ಆಧಾರ ವಿಲೇಜ ಕಾರ್ಯಕ್ರಮ**
   ಕಾರ್ಯರಂಭ : **2013** ರಲ್ಲಿ
   ಕಾರ್ಯಕ್ರಮದ ಉದ್ದೇಶ : ಸ್ಲಂನಲ್ಲಿರುವ ಮಕ್ಕಳಿಗೆ ಮತ್ತು ಅವಶ್ಯಕತೆಯಿರುವ ಕುಟುಂಬಗಳಿಗೆ ಮೂಲಭೂತ ಸೌಕರ್ಯಗಳನ್ನು ನೀಡುವುದು**.** ಅವರಿಗೆ ಉಚಿತ ಆರೋಗ್ಯ**,** ಶಿಕ್ಷಣ ಮತ್ತು ಉದ್ಯೋಗಾವಕಾಶಗಳನ್ನು ಒದಗಿಸಿ ಕೊಡುವುದು**.**
   ಫಲಾನುಭವಿಗಳು **:** ಇದುವರೆಗೆ **– 7700** ಜನರಿಗೆ ಉಚಿತ ವೈದ್ಯಕೀಯ ಸೇವೆ**,**
   **1200** ಕ್ಕೂ ಹೆಚ್ಚು ಸ್ಲಮ್ ಮಕ್ಕಳಿಗೆ ಶಿಕ್ಷಣದ ಸಹಾಯ**. 80** ಮನೆಗಳಿಗೆ ಉಚಿತ ಸೋಲಾರ ವಿದ್ಯುತ್ ನೀಡಿದ್ದು. ಸ್ಲಮ್ ನಲ್ಲಿರುವ **40** ಕ್ಕೂ ಹೆಚ್ಚು ಕುಟುಂಬಗಳಿಗೆ ಉಚಿತ ಮನೆ ಕಟ್ಟಿ ಕೊಟ್ಟಿದೆ**.**

4. **ಗೋಕಾಕ ಎಚ್.ಐ.ವಿ. / ಏಡ್ಸ್ ಆರೈಕೆ ಕೇಂದ್ರ**
   ಕಾರ್ಯಾರಂಭ : 2014 ರಲ್ಲಿ
   ಕಾರ್ಯಕ್ರಮದ ಉದ್ದೇಶ : ಗೋಕಾಕ ಎಚ್.ಐ.ವಿ. ಪೀಡಿತರಿಗೆ ವಿಶೇಷ ಕೇಂದ್ರ ಸ್ಥಾಪಿಸಿ ಅವರಿಗೆ ಸಿಗಬೇಕಾದ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಕೊಡುವುದು
   ಫಲಾನುಭವಿಗಳು : ಇದುವರೆಗೆ -12000 ಕ್ಕೂ ಹೆಚ್ಚು ಎಚ್.ಐ.ವಿ. ಪೀಡಿತರಿಗೆ ವಿವಿಧ ಸೇವೆಗಳನ್ನು ನೀಡಿದೆ.

5. **ಉತ್ಕರ್ಷ ವಿಶೇಷ ಶಾಲೆ**
   ಕಾರ್ಯಾರಂಭ : 2016 ರಲ್ಲಿ
   ಕಾರ್ಯಕ್ರಮದ ಉದ್ದೇಶ : ಎಚ್.ಐ.ವಿ. ಪೀಡಿತ ಸ್ಲಮ್ ನಲ್ಲಿರುವ ಮಕ್ಕಳು ಮತ್ತು ಬಡ ಮಕ್ಕಳಿಗೆ ಉಚಿತ ಶಾಲೆ ಮತ್ತು ಶಿಕ್ಷಣದ ಸಹಾಯ ಮಾಡುವುದು.
   ಫಲಾನುಭವಿಗಳು : ಒಟ್ಟು ಪ್ರತಿ ವರ್ಷ 300 ಕ್ಕೂ ಹೆಚ್ಚು ಮಕ್ಕಳಿಗೆ ಉಚಿತ ಶಿಕ್ಷಣದ ಸಹಾಯ

## ಮಹೇಶ ಫೌಂಡೇಶನದ ಸಾಧನೆಗಳು :

- 2010 ರಿಂದ ಇದುವರೆಗೆ ಸರಕಾರದ ಯಾವುದೇ ಹಣ ಸಹಾಯ ಪಡೆದುಕೊಳ್ಳದೇ ಸಮಾಜದಲ್ಲಿರುವ ದಾನಿಗಳ ಸಹಾಯದಿಂದ ನಡೆಯುತ್ತಿರುವ ಸಂಸ್ಥೆ.
- 2010 ರಿಂದ ಇದುವರೆಗೆ ಪ್ರವೇಶ ಪಡೆದ ಯಾವುದೇ ಎಚ್.ಐ.ವಿ. ಪೀಡಿತ ಮಗು ಮರಣ ಹೊಂದಿಲ್ಲ. ಎಲ್ಲರೂ ಆರೋಗ್ಯದಿಂದ ಜೀವನ ನಡೆಸುತ್ತಿದ್ದಾರೆ.
- ಕರ್ನಾಟಕ ರಾಜ್ಯದಲ್ಲಿ ಮೊದಲ ಎಚ್.ಐ.ವಿ.. ಪೀಡಿತರಿಗಾಗಿ ನಡೆಯುತ್ತಿರುವ ಸಂಸ್ಥೆಗೆ ಕರ್ನಾಟಕ ಸರಕಾರದಿಂದ ಅರ್ಹ ಸಂಸ್ಥೆ ಎಂಬ ಮಾನ್ಯತೆ.
- 2014 ರಲ್ಲಿ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಕರ್ನಾಟಕ ರಾಜ್ಯ ಪ್ರಶಸ್ತಿ 2017 ರಲ್ಲಿ ರಾಷ್ಟ್ರೀಯ ಪ್ರಶಸ್ತಿ ಪಡೆದ ರಾಜ್ಯದ ಹಾಗೂ ದೇಶದ ಅತ್ಯಂತ ಕಿರಿಯ ವ್ಯಕ್ತಿ.
- ಪ್ರತಿ ವರ್ಷ ಸುಮಾರು 29000 ಕ್ಕೂ ಹೆಚ್ಚು ಎಚ್.ಐ.ವಿ. ಪೀಡಿತರಿಗೆ ವಿವಿಧ ಸೇವೆಗಳ ಮುಖಾಂತರ ಸಹಾಯ ಮಾಡುತ್ತಿರುವ ಸಂಸ್ಥೆ.

- ಪ್ರತಿ ವರ್ಷ 6000 ಕ್ಕೂ ಹೆಚ್ಚು ದಾನಿಗಳಿಂದ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಹಾಯ ಮಾಡುತ್ತಿದ್ದಾರೆ.
- ಈ ಎಲ್ಲಾ ಕಾರ್ಯಕ್ರಮಗಳನ್ನು ಸರಿಯಾಗಿ ಮತ್ತು ಸುಸಜ್ಜಿತವಾಗಿ ನಡೆಸಲು ಸುಮಾರು 70 ಕ್ಕೂ ಹೆಚ್ಚು ಸಿಬ್ಬಂದಿಗಳು ಹಗಲು ರಾತ್ರಿ ಸಂಸ್ಥೆಯ ಕಾರ್ಯಕ್ರಮಗಳ ಯಶಸ್ವಿಗೆ ಶ್ರಮಿಸುತ್ತಿದ್ದಾರೆ.

ಭಾವನಾಜೀವಿಗಳಾದ ಇವರು ಮನಸ್ಸಿದ್ದಲ್ಲಿ ಮಾರ್ಗವಿದೆ ಎಂಬುದರಲ್ಲಿ ವಿಶ್ವಾಸವಿರಿಸಿ. ವಿದ್ಯೆಯ ಜೊತೆಗೆ ವಿನಯವನ್ನೂ ಮೈಗೂಡಿಸಿಕೊಂಡು ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವುದನ್ನು ಕಂಡು ಅನೇಕ ಪ್ರಶಸ್ತಿಗಳು ಅರಸಿಕೊಂಡು ಬಂದಿವೆ.

## ಮಹೇಶ ಜಾಧವ ಅವರಿಗೆ ಸಂದ ಪ್ರಶಸ್ತಿಗಳು:

- 2017- ರಲ್ಲಿ ಭಾರತದ ಸರ್ಕಾರದ ಗೌರವಾನ್ವಿತ ರಾಷ್ಟ್ರಪತಿಯವರಿಂದ 2017 ರ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ **ರಾಷ್ಟ್ರ ಪ್ರಶಸ್ತಿ.**
- 2014- ರಲ್ಲಿ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಕರ್ನಾಟಕ ಸರ್ಕಾರದ ಗೌರವಾನ್ವಿತ ರಾಜ್ಯಪಾಲರಿಂದ **ರಾಜ್ಯ ಪ್ರಶಸ್ತಿ.**
- 2017- ರಲ್ಲಿ ಜೀ ಕನ್ನಡ **ಹೆಮ್ಮೆಯ ಕನ್ನಡಿಗ ಪ್ರಶಸ್ತಿ.**
- 2017- ರಲ್ಲಿ ಸುವರ್ಣ ನ್ಯೂಸ್ ಮತ್ತು ಕನ್ನಡ ಪ್ರಭಾ **ಅಸಾಮಾನ್ಯ ಕನ್ನಡಿಗ ಪ್ರಶಸ್ತಿ.**
- 2017 - ರಲ್ಲಿ ಪಬ್ಲಿಕ್ ಟಿವ್ವಿಯಿಂದ **ಪಬ್ಲಿಕ್ ಹೀರೋ ಪುರಸ್ಕಾರ** ಮತ್ತು ವಿಶೇಷ ಕಾರ್ಯಕ್ರಮ.
- 2019 - ರಲ್ಲಿ ರಾಜ್ಯಮಟ್ಟದ **ಅಮ್ಮ ಪ್ರಶಸ್ತಿ**
- 2010 - ರಲ್ಲಿ ಆಲ್ ಅಬೌಟ್ ಬೆಲಗಾಮದಿಂದ **ವರ್ಷದ ವ್ಯಕ್ತಿ ಪ್ರಶಸ್ತಿ.**
- 2012 - ರಲ್ಲಿ ಅಮೇರಿಕೇರ್ಸ್ ಇಂಡಿಯಾ ಫೌಂಡೇಶನ ದಿಂದ **ಅಂತರಾಷ್ಟ್ರೀಯ ಪ್ರಶಸ್ತಿ.**
- 2012- ರಲ್ಲಿ ಸ್ವಾಮೀ ವಿವೇಕಾನಂದ ಫೌಂಡೇಶನ, ಹುಬ್ಬಳ್ಳಿ ಇವರಿಂದ **ಯುವ ಸಾಧಕ ಪ್ರಶಸ್ತಿ.**
- 2012 - ರಲ್ಲಿ ಕೆ ಎಲ್ ಇ ಕಾಲೇಜನಿಂದ ವಿಶೇಷ ಪ್ರಶಸ್ತಿ ಮತ್ತು ಸನ್ಮಾನ.
- 2012 ರಲ್ಲಿ ಗುದ್ಲೆಪ್ಪ ಹಳ್ಳಿಕೇರಿ **ಸೇವಾ ಗೌರವ ಪ್ರಶಸ್ತಿ.**
- 2015 ರಲ್ಲಿ ಟಾಟಾ ಸಂಸ್ಥೆಯಿಂದ **ದೇಶ ಕಾ ನಮಕ ಪ್ರಶಸ್ತಿ.**
- 2018 ರಲ್ಲಿ ಶ್ರೀ ಜಿ ಮಾದೇಗೌಡ ಪ್ರತಿಷ್ಠಾನ ರಾಜ್ಯಮಟ್ಟದ **ಸಮಾಜಸೇವಾ ಪ್ರಶಸ್ತಿ**
- 2017 ರಲ್ಲಿ ದೇಶಪಾಂಡೆ ಫೌಂಡೇಶನಿಂದ **ಯುವ ಸಾಧಕ ಪ್ರಶಸ್ತಿ**
- 2018 ರಲ್ಲಿ ಸಕಾಲ ದಿನಪತ್ರಿಕೆಯಿಂದ **ಪ್ರೇರಣಾ ಪ್ರಶಸ್ತಿ**

## ಪ್ರೇರಣಾತ್ಮಕ ಭಾಷಣಗಾರ:

2019 ಡಿಸೆಂಬರ್ ವರೆಗೆ ಮಹೇಶ್ ಜಾಧವ್ ಅವರು 1400 ಕ್ಕೂ ಹೆಚ್ಚು ಕಾಲೇಜಿನ ಕಾರ್ಯಕ್ರಮದಲ್ಲಿ ಭಾಗವಹಿಸಿ ಸುಮಾರು 3 ಲಕ್ಷಕ್ಕಿಂತ ಹೆಚ್ಚು ಕಾಲೇಜು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದ್ದಾರೆ.

ಕಿರಿಯ ವಯಸ್ಸಿನಲ್ಲಿಯೇ ಇವರ ಸಾಧನೆಯ ಕೀರ್ತಿ ದೊಡ್ಡದು. ಕೇವಲ 21 ನೇ ವಯಸ್ಸಿನಲ್ಲಿಯೇ ಸಮಾಜದ ಬಹುದೊಡ್ಡ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದೀರಿ. ತಮ್ಮ ಸಂಸ್ಥೆಯ ಮೂಲಕ ಎಚ್.ಐ.ವಿ. ಪೀಡಿತ ಅನಾಥ ಮಕ್ಕಳಿಗೆ- ಆಶಾಕಿರಣ ಅನಾಥಾಲಯ, ಏಡ್ಸ್ - ಸಹಾಯವಾಣಿ , ವಿವಾಹಸಂಸ್ಥೆ , ನಿರಾಶ್ರಿತ ಹೆಣ್ಣು ಮಕ್ಕಳಿಗೆ ಮಹಿಳಾ ಸೇವಾ ಕೇಂದ್ರಗಳನ್ನು ತೆರೆದು 55 ಕ್ಕೂ ಹೆಚ್ಚು ಮಕ್ಕಳಿಗೆ ಉಚಿತ ವಸತಿ ಊಟ ,ವೈದ್ಯಕೀಯ ಹಾಗೂ ಶಿಕ್ಷಣ ಸೌಲಭ್ಯ ಕಲ್ಪಿಸಿರುವುದು ಅವರ ಸಾಮಾಜಿಕ ಕಳಕಳಿಯನ್ನು ತೋರಿಸುತ್ತದೆ ಮಾತ್ರವಲ್ಲ 2017ರಲ್ಲಿ ಮಕ್ಕಳ ಕಲ್ಯಾಣಕ್ಕಾಗಿ ಶ್ರಮಿಸಿದ ಮಹನೀಯರಿಗೆ ಕೇಂದ್ರ ಸರಕಾರ ನೀಡುವ ದೇಶದ ಅತ್ಯುನ್ನತ ರಾಷ್ಟ್ರೀಯ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಎಚ್.ಐ.ವಿ./ಏಡ್ಸ್ ಮತ್ತು ಭಿಕ್ಷಾಟನೆ ಮುಕ್ತ ಸಮಾಜದ ಕನಸನ್ನು ಹೊತ್ತು ಅದನ್ನು ಸಾಕಾರಗೊಳಿಸುವಲ್ಲಿಯ ಅವರ ಅವಿರತ ಪ್ರಯತ್ನ ತುಂಬಾ ಶ್ಲಾಘನೀಯ. ಮಹೇಶ್ ಜಾಧವ್ ಅವರ ಈ ಸಾಮಾಜಿಕ ಕಾರ್ಯಗಳಿಗೆ ನಮ್ಮದೊಂದು ಸಲಾಂ.